**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C.Lok.14/2014**

ಸಾಕ್ಷಿದಾರರ ಹೆಸರು : ಸವಿತಾ

ಗಂಡನ ಹೆಸರು : ವಿ. ಕೆ. ಶಾಸ್ತ್ರಿ

ವಯಸ್ಸು : 38 ವರ್ಷ

ಉದ್ಯೋಗ : ಗೃಹಿಣಿ

ವಾಸ ಸ್ಥಳ : ದಾವಣಗೆರೆ

ಪಿ.ಡಬ್ಲ್ಯೂ 3

ಸಿ.ಡಬ್ಲ್ಯೂ 4

ದಿ: 25-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀ ಟಿ.ಆರ್.ಎಸ್.)**:

1. ಈ ಹಿಂದೆ ನಾನು ದಾವಣಗೆರೆಯ ಡಿ. ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ 2017 ರಿಂದ 2019 ರವರೆಗೆ accounts ವಿಭಾಗದಲ್ಲಿ ದಿನಕೂಲಿ ನೌಕರರಾಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿಃ 06-03-2014 ರಂದು ಎಂದಿನಂತೆ ಕೆಲಸ ಮುಗಿಸಿಕೊಂಡು ಮನೆಗೆ ಹೋಗಿದ್ದೆ. ಪೊಲೀಸರು Land line ನಿಂದ ಫೋನ್ ಕಛೇರಿಗೆ ಬರಲು ಹೇಳಿದರು. ಅಲ್ಲಿ ಹೋಗಿ ನಾನು ನೋಡಿದಾಗ trap ಆಗಿದೆ ಅಂತ ಗೊತ್ತಾಯಿತು. ಆ Trap ಆರೋಪಿಗೆ ಸಂಬಂಧಪಟ್ಟಿದ್ದು ಇತ್ತು. ಆರೋಪಿತಳನ್ನು ನಾನು ನೋಡಿದ್ದೇನೆ. ಪೊಲೀಸರು Voice recorder ಪ್ಲೇ ಮಾಡಿದ್ದರು ಮತ್ತು ಯಾರ

ಧ್ವನಿ ಅಂತ ಗುರುತಿಸಲು ಹೇಳಿದರು. ಆ Voice recorder ನ್ನು ಕೇಳಿ ಧ್ವನಿ ಆರೋಪಿಯದ್ದೇ ಅಂತ ಗುರುತಿಸಿದೆನು.

3. Accounts ವಿಭಾಗದಲ್ಲಿ ನಾನು Cash book ಬರೆಯುತ್ತಿದ್ದೆ, ಸಾಲದ ಅರ್ಜಿ ಸ್ವೀಕರಿಸುತ್ತಿದ್ದೆ, ಸಾಲದ ಮರು ಪಾವತಿಗೆ ರಶೀದಿ ಹಾಕುತ್ತಿದ್ದೆ ಮತ್ತು ಬ್ಯಾಂಕ್ ಗೆ ಪಾವತಿಸುತ್ತಿದ್ದೆ ಹಾಗೂ ಲೆಡ್ಜರ್ ಬರೆಯುತ್ತಿದ್ದೆ. ಆ ದಿನ ನಾನು Cash book ಬರೆಯುತ್ತಿರುವಾಗ ನನಗೆ ಏನು ಬರೆಯುತ್ತಿದ್ದ ಬಗ್ಗೆ ಪೊಲೀಸರು ಕೇಳಿದರು. ಅದಕ್ಕೆ ನಾನು ಆ ನಗದು ಪುಸ್ತಕವನ್ನು ತೆಗೆದುಕೊಂಡು ಹೋಗಿ ತೋರಿಸಿದೆ. ಆ ದಿನ ಸಾಲದ ಮರುಪಾವತಿ ಆದ ಬಗ್ಗೆ ತೋರಿಸಿದೆ. ಆ ದಿನ ₹6126/- ರೂಪಾಯಿ ಕರ್ನಾಟಕ ಬ್ಯಾಂಕ್ ಗೆ ಜಮಾ ಮಾಡಿದ್ದೆ. ಆ ದಿನ ಕಛೇರಿಯಲ್ಲಿ ನಗದು ಹಣ ಇರಲಿಲ್ಲ ಆದರೆ ಗಂಗಾ ಕಲ್ಯಾಣಕ್ಕೆ ಸಂಬಂಧಪಟ್ಟ ₹2390/- ರೂಪಾಯಿ ಇತ್ತು. ಆ ಹಣ ನನ್ನ ಬಳಿ ಇರಲಿಲ್ಲ ಪ್ರಕಾಶರವರ ಬಳಿ ಇತ್ತು. ಆರೋಪಿಯು ಅ ಹಣವನ್ನು ಪ್ರಕಾಶರವರಿಗೆ ಬೆಸ್ಕಾಂಗೆ ಕಟ್ಟಲು ಹೇಳಿದ್ದರು. ನಗದು ಪುಸ್ತಕದಲ್ಲಿ ಆರೋಪಿಯು ಸಹಿ ಮಾಡಿದ್ದರು.

**<u>ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ</u>**:

ಆರೋಪಿ ಪರ ವಕೀಲರು ಸ್ವಲ್ಪ ಸಮಯದ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 25-02-2026 ರಂದು ಮಧ್ಯಾಹ್ನ 12.50 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್.ಕೆ., ವಕೀಲರಿಂದ ಆರೋಪಿತರ ಪರವಾಗಿ**:

4. ಆ ದಿನ ನಾನು ಸಂಜೆ 5.30 ಗಂಟೆಯವರೆಗೆ ನನ್ನ ಕರ್ತವ್ಯ ಮಾಡಿ ಮನೆಗೆ ಹೋಗಿರುತ್ತೇನೆ. Voice recording ಆದಾಗ ಎಷ್ಟು ಗಂಟೆ ಆಗಿತ್ತು ಅಂತ ನನಗೆ ಗೊತ್ತಿಲ್ಲ. ಆ ದಿನ ನಾನು ಮನೆಗೆ ಹೋಗಿ ಒಂದು ಗಂಟೆಯ ನಂತರ ನನಗೆ ಪೊಲೀಸರು ಫೋನ್ ಮಾಡಿದರು. Electronic device ನಲ್ಲಿ ಧ್ವನಿಯನ್ನು ಕಂಡು ಹಿಡಿಯುವ ಬಗ್ಗೆ ಪರಿಣಿತಿ ನನಗೆ ಇರುವುದಿಲ್ಲ. ಸಾಕ್ಷಿದಾರರು ಹೇಳುತ್ತಾರೆ Electronic device ನಲ್ಲಿ ಸಂಭಾಷಣೆಯನ್ನು ಪ್ಲೇ ಮಾಡಿದ್ದರು ನಾನು ಧ್ವನಿಯನ್ನು ಕೇಳಿಸಿಕೊಂಡಿದ್ದೇನೆ. Voice recording ನ್ನು ನಮಗೆ ಕೇಳಿಸಿದ್ದನ್ನು ಪುನಃ recording ಮಾಡಿಲ್ಲ. ಧ್ವನಿಯನ್ನು ಯಾವುದೇ ವ್ಯಕ್ತಿಯು ಮಿಮಿಕ್ರಿ ಮಾಡಬಹುದು ಅಂದರೆ ನನಗೆ ಗೊತ್ತಿಲ್ಲ. ಧ್ವನಿಯನ್ನು ನಾನು ಗುರುತಿಸಿದ ಬಗ್ಗೆ ವಾಸ್ತವಿಕ ಇರುವುದಿಲ್ಲ ಅಂದರೆ ಸರಿಯಲ್ಲ. ಆ ದಿನ ಪೊಲೀಸರ ಕರೆ ಬಂದ ನಂತರ ನಮ್ಮ ಕಛೇರಿಗೆ ಹೋದಾಗ ನಮ್ಮ ಸಿಬ್ಬಂದಿ ಯಾರು ಇರಲಿಲ್ಲ ಅಂದರೆ ಸಾಕ್ಷಿದಾರರು ಹೇಳುತ್ತಾರೆ ಮೇಡಮ್ ಮತ್ತು ಪೊಲೀಸರು ಇದ್ದರು.

**ಮರುವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ (ಶ್ರೀ ಟಿ.ಆರ್.ಎಸ್.)**:

ಪ್ರಶ್ನೆಃ ವಮೆಡಮ್ ಅಂದರೆ ಯಾರು?

ಉತ್ತರಃ ಜಯಮ್ಮ (ಆರೋಪಿ)

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.